**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**

**ಎಸ್.ಸಿ. ನಂಃ 01/2018**

ಪ್ರಾಸಾ ಃ 3 (ಚಾಸಾ ಃ 5 )

ಪ್ರಮಾಣೀಕರಿಸಿದ ದಿನಾಂಕಃ **02-06-2018**

| | |
|---|---|
| ಹೆಸರು | ಃ ಸುನಿತಮ್ಮ |
| ಗಂಡನ ಹೆಸರು | ಃ ನಾರಾಯಣ |
| ವಯಸ್ಸು | ಃ 27 ವರ್ಷ |
| ಕೆಲಸ | ಃ ಕೂಲಿ |
| ವಾಸ | ಃ ಬೆಟ್ಟಗೇರನಹಳ್ಳಿ |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನೊಂದ ಬಾಲಕಿ ನನ್ನ ತಂಗಿ, ವೆಂಕಟರೆಡ್ಡಿ ನನ್ನ ತಂದೆ, ಲಕ್ಷ್ಮಿದೇವಮ್ಮ ನನ್ನ ತಾಯಿ, ಚಾಸಾ 4 ನಾರಾಯಣಸ್ವಾಮಿ ನನ್ನ ಗಂಡ, ನನ್ನ ಮಾವನ ಹೆಸರು ಗಂಗಪ್ಪ, ಹನುಮಂತಪ್ಪ ಅಲ್ಲ, ಚಾಸಾ 6 ನಾಗಪ್ಪ ಮತ್ತು ಚಾಸಾ 7 ಹನುಮಂತಪ್ಪ ಗೊತ್ತು, ಆರೋಪಿತರು ಗೊತ್ತು. ಸುಮಾರು 4 ವರ್ಷಗಳಿಂದ ನೊಂದ ಬಾಲಕಿ ನಮ್ಮ ಮನೆಯಲ್ಲಿ ಇರುತ್ತಾಳೆ. ಆಕೆ ಓದಿಲ್ಲ. ಸುಮಾರು 6 ತಿಂಗಳ ಹಿಂದೆ ನಾನು ನನ್ನ ಗಂಡನನ್ನು ಆಸ್ಪತ್ರೆಗೆ ಸೇರಿಸಿದ್ದು ನಾನು, ನನ್ನ ತಂದೆ ತಾಯಿ ಆಸ್ಪತ್ರೆಯಲ್ಲಿದ್ದೆವು. ನನ್ನ ಗಂಡನಿಗೆ ಶಸ್ತ್ರ ಚಿಕಿತ್ಸ ಆಗಿದ್ದು, ಆ ದಿನ ಅಲ್ಲೇ ಉಳಿದುಕೊಂಡೆವು. ನಂತರ ಬೆಳಿಗ್ಗೆ ಎದ್ದು ಊರಿಗೆ ಹೋದೆ, ನನ್ನ ತಂಗಿ ಅಳುತ್ತಿದ್ದಳು. ನಾನು ನೊಂದ ಬಾಲಕಿಯನ್ನು ರಾತ್ರಿ 10.00 ಗಂಟೆಗೆ ಕೇಳಿದಾಗ ಆಕೆ ಮೂತ್ರ ವಿಸರ್ಜನೆಗೆ ಹೋಗಿದ್ದಾಗ ಮುನಿರಾಜು ಆಕೆಯ ಬಾಯಿಗೆ ಬಟ್ಟೆ ಇಟ್ಟು ಅವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ತನ್ನನ್ನು ಕೆಡಸಿದ್ದಾಗಿ ನನ್ನ ತಂಗಿ ಹೇಳಿದಳು.

ನಂತರ ನಾನು ನನ್ನ ತಂದೆ ತಾಯಿ ಬಂದ ನಂತರ ಅವರಿಗೆ ನಾನು ಈ ವಿಷಯ ಹೇಳಿದೆ. ನಂತರ ಊರಿನ ಮುಖಂಡರಿಗೆ ನ್ಯಾಯ ಪಂಚಾಯಿತಿ ಮಾಡುವಂತೆ ಹೇಳಿದರು. ನಾಗಪ್ಪ, ಹನುಮಂತಪ್ಪ ಮತ್ತು ಇತರರು ಪಂಚಾಯಿತಿ ಮಾಡುವುದಾಗಿ ಹೇಳಿದರು. ಆರೋಪಿ ಪದ್ಮಮ್ಮ, 1ನೇ ಆರೋಪಿ ಮುನಿರಾಜು ಇಬ್ಬರು ಪಂಚಾಯಿತಿಗೆ ಬಂದಿದ್ದರು. 1ನೇ ಆರೋಪಿ ನೊಂದ ಬಾಲಕಿಯ ಮೇಲೆ ಅತ್ಯಾಚಾರ ಮಾಡಿರುವುದು ತಪ್ಪಾಗಿದೆ ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ. ನಂತರ ಪಂಚಾಯಿತಿ ಮಾಡಿದಾಗ ಆರೋಪಿತರು ಯಾರೂ ಬರಲಿಲ್ಲ. ಪಂಚಾಯಿತಿ ಆದ 15 ದಿನಕ್ಕೆ

ನನ್ನ ತಂಗಿ ಕೆರೆಗೆ ಪಾತ್ರೆಗಳು ಮತ್ತು ಬಟ್ಟೆ ತೆಗೆದುಕೊಂಡು ತೊಳೆಯಲು ಹೋಗಿದ್ದಾಗ ಎಷ್ಟು ಹೊತ್ತಾದರೂ ಆಕೆ ವಾಪಸ್ಸು ಬರಲಿಲ್ಲ. 6.00 ಗಂಟೆಯಾಗಿದ್ದು ನಮ್ಮ ತಂದೆ ತಾಯಿ ನೋಡಿಕೊಂಡು ಬರಲು ಹೋದರು. ನೊಂದ ಬಾಲಕಿ ಅಲ್ಲಿ ಬಿದ್ದು ಹೋಗಿದ್ದಳು. ಯಾವುದೇ ವಿಷದ ವಸ್ತುಗಳನ್ನು ಕುಡಿಸಿದ್ದು ಆಕೆ ಬಿದ್ದು ಹೋಗಿದ್ದಳು. ಎಲ್ಲಾ ಆರೋಪಿತರು ಸೇರಿ ಆ ರೀತಿ ಮಾಡಿರುತ್ತಾರೆ. ನಂತರ ನೊಂದ ಬಾಲಕಿಯನ್ನು ಅಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಆರೋಪಿತರು ನನ್ನ ತಂಗಿಯನ್ನು ಸಾಯಿಸುವ ಉದ್ದೇಶದಿಂದ ಆ ರೀತಿ ಮಾಡಿದರು. ಈ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ನನ್ನ ಗಂಡನಿಗೆ ಶಸ್ತ್ರ ಚಿಕಿತ್ಸೆಯಾಗಿ 4 ವರ್ಷಗಳಾಗಿದ್ದು ಆ ದಿನ ರಾಡ ಅನ್ನು ತೆಗೆಸಲು ಹೋಗಿದ್ದರು. ಆಸ್ಪತ್ರೆಯಲ್ಲಿ ನನ್ನ ಗಂಡ ದಾಖಲಾಗಿದ್ದ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ. ಆ ದಿನ ನಮ್ಮ ಮನೆಯಲ್ಲಿ ನೊಂದ ಬಾಲಕಿಯ ಜೊತೆ ಬೇರೆ ಯಾರೂ ಇರಲಿಲ್ಲ. ನನ್ನ ಗಂಡನಿಗೆ 4 ಜನ ಅಣ್ಣ ತಮ್ಮಂದಿರು. ನಾಗರಾಜು, ರವಿ ಮತ್ತು ಶ್ರೀನಿವಾಸ. ಶಿಲ್ಪ ನನ್ನ ತಂಗಿ, ಆ ಸಮಯದಲ್ಲಿ ಆಕೆ ಗರ್ಭಿಣಿಯಾಗಿದ್ದಳು. ಆ ಸಮಯದಲ್ಲಿ ನೊಂದ ಬಾಲಕಿ ಮತ್ತು ಶಿಲ್ಪ ಮನೆಯಲ್ಲಿದ್ದರು. ನಾಗರಾಜು, ರವಿ ಮತ್ತು ಶ್ರೀನಿವಾಸ ರವರು ಕೋಲಾರ ಮತ್ತು ಬೆಂಗಳೂರಿನಲ್ಲಿ ವಾಸ ಇದ್ದು, ನಮ್ಮ ಮನೆಯಲ್ಲಿ ಇರುವುದಿಲ್ಲ. ಶಿಲ್ಪ ರವರ ಗಂಡನ ಹೆಸರು ನಾಗರಾಜು, ಅವರು ನಮ್ಮ ಪಕ್ಕದ ಮನೆಯಲ್ಲಿ ವಾಸ ಇದ್ದರು. ಶ್ರೀನಿವಾಸ್ ಕೋಲಾರದ ಇಟ್ಟಿಗೆ ಪ್ಯಾಕ್ಟರಿಯಲ್ಲಿ ಇದ್ದಾರೆ.

ನಾನು ನನ್ನ ತಂದೆ ತಾಯಿ ಮತ್ತು ಗಂಡ ಒಟ್ಟಿಗೆ ವಾಸ ಇದ್ದೇವೆ. ನನಗೆ ಇಬ್ಬರು ಮಕ್ಕಳು. ಅವರು ನಮ್ಮ ಜೊತೆಯಲ್ಲಿದ್ದಾರೆ. ನಾವು ಆಸ್ಪತ್ರೆಗೆ ಹೋಗಿದ್ದಾಗ ನಮ್ಮ ಮಕ್ಕಳು ನಮ್ಮ ಮನೆಯಲ್ಲಿದ್ದರು. ನೊಂದ ಬಾಲಕಿ ಅವರನ್ನು ನೋಡಿಕೊಳ್ಳುತ್ತಿದ್ದಳು. ನಮಗೆ ಎರಡು ಮನೆಗಳು ಇವೆ ಎಂಬ ಬಗ್ಗೆ ದಾಖಲೆಗಳು ಇವೆ. ನಮ್ಮ ಮನೆಯ ಪೂರ್ವಕ್ಕೆ ಬೇರೆಯವರಿಗೆ ಸೇರಿದ ಹುಣಿಸೆ ಮರ ಇದೆ. ಪಶ್ಚಿಮಕ್ಕೆ ಬೇರೆಯವರ ಖಾಲಿ ಜಾಗ ಇದೆ, ಉತ್ತರಕ್ಕೆ ನನ್ನ ತಂಗಿಯ ಮನೆ, ದಕ್ಷಿಣಕ್ಕೆ ಆರೋಪಿತರ ಮನೆ ಇದೆ.

ನಮ್ಮ ತಂಗಿ ವಾಸ ಇರುವ ಮನೆಯ ಪೂರ್ವಕ್ಕೆ ಮುನಿಯಪ್ಪ ರವರ ಮನೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಹನುಮಂತಪ್ಪ ರವರ ಮನೆ ಇದೆ. ನಮಗೆ ಸೇರಿದ ಎರಡು ಮನೆಗಳು ಇರುವುದಿಲ್ಲ, ಒಂದೇ ಮನೆ ಇರುವುದು ಎಂದರೆ ಸರಿಯಲ್ಲ. ಹನುಮಂತಪ್ಪ ರವರ ಮಗ ನಾರಾಯಣಸ್ವಾಮಿ ಗೊತ್ತು, ಆತನ ಮೇಲೆ ಆರೋಪಿ, ಅಶ್ವಿನಿಯನ್ನು ಅತ್ಯಾಚಾರ ಮಾಡುವ ಪ್ರಯತ್ನ ಪಟ್ಟ ಎಂದು ಕೇಸು ದಾಖಲಾಗಿದೆ ಎಂದರೆ ಸರಿ. ಆ ಕೇಸಿನಿಂದ ತಪ್ಪಿಸಿಕೊಳ್ಳಲು ಮತ್ತು ಆರೋಪಿತರ ಮನೆಯನ್ನು ಹೊಡೆದುಕೊಳ್ಳಲು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಸ್ವಂತ ಊರು ಊಲವಾಡಿ, ಚಿಂತಾಮಣಿ ತಾಲ್ಲೂಕು.

ನೊಂದ ಬಾಲಕಿಗೆ ಓದಲು ಬರೆಯಲು ಬರುವುದಿಲ್ಲ. ಹೆಸರು ಮತ್ತು ಒಂದು ಎರಡು ಬರೆಯುವುದು ಮಾತ್ರ ಗೊತ್ತು. ಊಲವಾಡಿ ಗ್ರಾಮದಲ್ಲಿ ಆಕೆ 1ನೇ ತರಗತಿಯವರೆಗೆ ಮಾತ್ರ ಓದಿದ್ದಾಳೆ. ನಾನು 5ನೇ ತರಗತಿಯವರೆಗೆ ಊಲವಾಡಿ ಗ್ರಾಮದಲ್ಲಿ ಓದಿದ್ದೇನೆ. ನನ್ನ ತಂದೆ ಒಕ್ಕಲಿಗರು ಎಂದರೆ ಸರಿಯಲ್ಲ. ನಮ್ಮ ತಾತನ ಹೆಸರು ನಾರಾಯಣಪ್ಪ. ನನ್ನ ತಂದೆಗೆ ಊಲವಾಡಿಯಲ್ಲಿ ಬೇರೆ ಮದುವೆ ಆಗಿದ್ದು, ಇಲ್ಲಿ ನನ್ನ ತಾಯಿಯ ಜೊತೆ ವಾಸ ಇದ್ದಾರೆ ಎಂದರೆ ಸರಿ. ನನಗೆ ಒಬ್ಬ ತಮ್ಮ ಇದ್ದಾನೆ. ಆತನ ಹೆಸರು ವೆಂಕಟೇಶ್, ಆತ ಊಲವಾಡಿಯಲ್ಲಿದ್ದಾನೆ. ಆತ ಊಲವಾಡಿಯಲ್ಲಿ ನಮ್ಮ ತಂದೆಯ ಜೊತೆ ಇದ್ದಾನೆ. ನಮ್ಮ ತಾಯಿ ನಮ್ಮ ಜೊತೆ ಇದ್ದಾರೆ.

ನಾವು ಆಸ್ಪತ್ರೆಗೆ ಹೋಗಿದ್ದಾಗ ನಮ್ಮ ತಂದೆ ನಮ್ಮ ಜೊತೆ ಇದ್ದರು. ನೊಂದ ಬಾಲಕಿ ಒಬ್ಬಳನ್ನೇ ಮನೆಯಲ್ಲಿ ಬಿಡಬಾರದು ಎಂದು ನಮಗೆ ಅನ್ನಿಸಲಿಲ್ಲ ಕಾರಣ ಆ ರೀತಿ ಆಗುತ್ತದೆ ಎಂದು ನಮಗೆ ಗೊತ್ತಿರಲಿಲ್ಲ. ನನ್ನ ಗಂಡನಿಗೆ ಶಸ್ತ್ರ ಚಿಕಿತ್ಸೆ ಆಗಿರಲಿಲ್ಲ ಮತ್ತು ನಾವು ಆಸ್ಪತ್ರೆಗೆ ಹೋಗಿರಲಿಲ್ಲ ಹಾಗೂ ಮನೆಯಲ್ಲಿದ್ದೆವು ಎಂದರೆ ಸರಿಯಲ್ಲ. ಬೆಳಿಗ್ಗೆ 10.00 ಗಂಟೆಗೆ ನಾನು ನನ್ನ ತಾಯಿ ಮನೆಗೆ ಬಂದೆವು. ನಮ್ಮ ತಂದೆ 4.00 ಗಂಟೆಗೆ ಮನೆಗೆ ಬಂದರು. ನನ್ನ ತಂಗಿ ಘಟನೆಯ ವಿಷಯವನ್ನು ನನಗೆ ಹೇಳಿದಳು. ನಮ್ಮ ತಾಯಿ ಆ ದಿನ ಆರೋಪಿತರ ಮನೆಗೆ ಹೋಗಿ ಈ ವಿಷಯದ ಬಗ್ಗೆ ಕೇಳಿದಳು. ನನ್ನ ತಂದೆ ಮತ್ತು ತಾಯಿ ಇಬ್ಬರೂ 3.00 ಗಂಟೆಗೆ ಹೋಗಿ ಕೇಳಿದರು. ಆ ಸಮಯದಲ್ಲಿ 1ನೇ ಆರೋಪಿ ಮತ್ತು ಅವರ ಅಮ್ಮ ಮನೆಯಲ್ಲಿದ್ದರು.

1ನೇ ಆರೋಪಿಯ ಅಜ್ಜಿಗೆ ತುಂಬಾ ವಯಸ್ಸಾಗಿದ್ದು, ಆಕೆಗೆ ಓಡಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ, ಆಕೆ ಕೂಲಿಗೆ ಹೋಗುತ್ತಾರೆ. 1ನೇ ಆರೋಪಿಯ ತಾಯಿಗೆ ತುಂಬಾ ಆರೋಗ್ಯದ ತೊಂದರೆ ಇದ್ದು, ಹೃದಯದ ಖಾಯಿಲೆ ಇದ್ದು, ಓಡಾಡಲು ಆಗುವುದಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿ ಶೌಚಾಲಯ ಇರುವುದಿಲ್ಲ, ಆ ಸಮಯದಲ್ಲಿ ಇರುವುದಿಲ್ಲ. ಶೌಚಾಲಯ ನಮ್ಮ ಮನೆಯಲ್ಲಿ ಆಗಲೂ ಇತ್ತು ಎಂದರೆ ಸರಿಯಲ್ಲ. ನನ್ನ ತಂಗಿಗೆ ಬಾಯಲ್ಲಿ ಬಟ್ಟೆ ಇಟ್ಟಿದ್ದರಿಂದ ಆಕೆ ಕಿರುಚಿಕೊಳ್ಳಲಿಲ್ಲ ಎಂದು ಹೇಳಿದಳು. ನೊಂದ ಬಾಲಕಿ ನನ್ನ ಬಳಿ 1ನೇ ಆರೋಪಿ ತನ್ನ ಬಾಯಿಗೆ ಬಟ್ಟೆ ತುರುಕಿ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ನಾಗಪ್ಪ, ಹನುಮಪ್ಪ ಮತ್ತು ಇತರರು ಪಂಚಾಯಿತಿ ಮಾಡಿದರು. ಮೆಂಬರ್ ಬುಜ್ಜಪ್ಪ ಗೊತ್ತು, ಊರಿನಲ್ಲಿ ಸಮಸ್ಯೆಯಾದರೆ ಅವರ ಮುಂದಾಳತ್ವದಲ್ಲಿ ಇತ್ಯರ್ಥ ಮಾಡುತ್ತಾರೆಂದರೆ ಸರಿ. ನಾವು ಬುಜ್ಜಪ್ಪ ರವರನ್ನು ನ್ಯಾಯ ದೊರಕಿಸಿಕೊಡುವಂತೆ ಕೇಳಿಲ್ಲ, ಆ ರೀತಿಯ ಘಟನೆ ಆಗಿಲ್ಲದೇ ಇದ್ದುದರಿಂದ ಅವರ ಬಳಿ ಪಂಚಾಯಿತಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ 1ನೇ ಆರೋಪಿ ಅತ್ಯಾಚಾರ ಮಾಡಿದ್ದನ್ನು ಒಪ್ಪಿಕೊಂಡು ಮದುವೆಯಾಗುತ್ತೇನೆಂದು ಹೇಳಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚಾಯಿತಿ ಆಗಿಲ್ಲ ಎಂದರೆ ಸರಿಯಲ್ಲ.

ನಾನು ಕೆರೆಯ ಬಳಿ ಹೋಗಿರಲಿಲ್ಲ. ನೊಂದ ಬಾಲಕಿ ಘಟನೆಯಾದ 15 ದಿನಕ್ಕೆ ಪಾತ್ರೆ ಮತ್ತು ಬಟ್ಟೆಗಳನ್ನು ತೆಗೆದುಕೊಂಡು ಕೆರೆಯ ಬಳಿ ಹೋಗಿಲ್ಲ ಮತ್ತು ಯೂವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆಕೆಗೆ ಆರೋಪಿತರು ಯಾರೂ ವಿಷ ಪ್ರಾಶನ ಮಾಡಿಸಿರಲಿಲ್ಲ ıವತ್ತು ಆಕೆ ಪ್ರಜ್ಞೆ ತಪ್ಪಿ ಬಿದ್ದಿರಲಿಲ್ಲ ಎಂದರೆ ಸರಿಯಲ್ಲ. ನಾರಾಯಣಸ್ವಾಮಿ ವಿರುದ್ದ ಇರುವ ಕೇಸಿನಿಂದ ತಪ್ಪಿಸಿಕೊಳ್ಳಲು ಆತನೇ ಸಂಚು ರೂಪಿಸಿ ನಮ್ಮ ಮುಖಾಂತರ ಈ ಸುಳ್ಳು ಕೇಸನ್ನು ಕೊಡಿಸಿದ್ದಾನೆ ಎಂದರೆ ಸರಿಯಲ್ಲ. ಆತನೇ ಸುಳ್ಳು ಸಾಕ್ಷ್ಯ ನುಡಿಯುವಂತೆ ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**

**ಎಸ್.ಸಿ. ನಂಃ 01/2018**

ಪ್ರಾಸಾ ಃ 4 (ಚಾಸಾ ಃ 6 )

ಪ್ರಮಾಣೀಕರಿಸಿದ ದಿನಾಂಕಃ **02-06-2018**

| | |
|---|---|
| ಹೆಸರು | ಃ ನಾಗಪ್ಪ |
| ತಂದೆಯ ಹೆಸರು | ಃ ಚಿನ್ನಪ್ಪ |
| ವಯಸ್ಸು | ಃ 47 ವರ್ಷ |
| ಕೆಲಸ | ಃ ವ್ಯವಸಾಯ |
| ವಾಸ | ಃ ಬೆಟ್ಟಗೇರಹಳ್ಳಿ |

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನಮ್ಮ ಊರಿನ ನೊಂದ ಬಾಲಕಿ, ವೆಂಕಟರೆಡ್ಡಿ, ಲಕ್ಷ್ಮಿದೇವಮ್ಮ, ಸುನಿತಮ್ಮ, ಹನುಮಂತಪ್ಪ ಗೊತ್ತು, ಆರೋಪಿತರು ಗೊತ್ತು, ಸುಮಾರು 7 ತಿಂಗಳ ಹಿಂದೆ ನೊಂದ ಬಾಲಕಿಯ ಮೇಲಕೆ ಮುನಿರಾಜು ಅತ್ಯಾಚಾರ ಮಾಡಿದ್ದ ವಿಷಯದಲ್ಲಿ ಊರಿನಲ್ಲಿ ಪಂಚಾಯಿತಿ ಸೇರಿದ್ದು, ನಾನು ಮುಳಬಾಗಿಲುನಲ್ಲಿದ್ದಾಗ ನನ್ನನ್ನು ಪಂಚಾಯಿತಿಗೆ ಬರಬೇಕು ಎಂದು ಹೇಳಿದ್ದರು, ನಾನು ಪಂಚಾಯಿತಿಗೆ ಹೋದೆ, 1ನೇ ಆರೋಪಿ ತನ್ನ ಕಡೆಯವನ್ನು ಕರೆಸಬೇಕೆಂದು ಹೇಳಿದ್ದು, 4 ದಿನ ಸಮಯ ಕೇಳಿದ್ದರು. 4 ದಿನಗಳ ನಂತರ ಮುನಿರಾಜು, ಅವರ ಅಕ್ಕ ಮಾವ ಬಂದಿದ್ದರು. 1ನೇ ಆರೋಪಿಯ ತಂದೆ ಬರಲಿಲ್ಲ, ನಾವೆಲ್ಲರೂ ಕುಳಿತು ಆಕೆ ಮೈನರ್ ಇದ್ದುರಿಂದ ವಯಸ್ಕಳಾದ ನಂತರ ಮದುವೆ ಮಾಡಿಕೊಳ್ಳುತ್ತೇನೆ, ನಾನು ತಪ್ಪು ಮಾಡಿರುತ್ತೇನೆ ಎಂದು 1ನೇ ಆರೋಪಿ ಹೇಳಿದ್ದು, ಯಾವುದೇ ರೀತಿಯ ಗಲಾಟೆ ಮಾಡಿಕೊಳ್ಳಬೇಡಿ ಎಂದು ಹೇಳಿದೆವು. ಒಂದು ತಿಂಗಳ ನಂತರ ಮತ್ತೆ ಗಲಾಟೆ ಮಾಡಿಕೊಂಡರು ಎಂದು ತಿಳಿಯಿತು. 1ನೇ ಆರೋಪಿಯನ್ನು ಬೇರೆ ಹುಡುಗಿ ನೋಡಿ ಮದುವೆ ಮಾಡಲು ಎಲ್ಲೋ ಕರೆದುಕೊಂಡು ಹೋಗಿ 3 ದಿನ ಇಟ್ಟುಕೊಂಡಿದ್ದಾಗಿ ತಿಳಿಯಿತು.

ಕೆರೆಯ ಬಟ್ಟೆ ತೆಗೆದುಕೊಂಡು ಹೋಗಿದ್ದಾಗ ವಿಷ ಕುಡಿಸಿ ಸಾಯಿಸುವ ಪ್ರಯತ್ನ ಪಟ್ಟರು ಎಂದು ಯಾರೋ ಹೇಳಿದರು. ಪೊಲೀಸರು ಮಹಜರ್‌ಗೆ ಬಂದಿದ್ದಾಗ ನಾನು ಎಲ್ಲಾ ವಿಚಾರ ಹೇಳಿದ್ದೇನೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ಮೊದಲು ನಮ್ಮ ಅಜ್ಜ ತುಪಾಕಿ ರಾಮಯ್ಯ ರವರ ಮುಖಂಡತ್ವದಲ್ಲಿ ಪಂಚಾಯಿತಿ ನಡೆಯುತ್ತಿತ್ತು, ಈಗ ಹಾಲಿ ಗ್ರಾಮಪಂಚಾಯಿತಿಯ ಸದಸ್ಯರ ಬುಜ್ಜಪ್ಪ ಎಂದರೆ ಸರಿ. ಅದಕ್ಕೆ ಮೊದಲು ಸುಬ್ಬಯ್ಯ, ಅದಕ್ಕೆ ಮೊದಲು ತಾಯಪ್ಪ ರವರ ನಾರಾಯಣಸ್ವಾಮಿ ಇದ್ದರು ಎಂದರೆ ಸರಿ. ನಾವು ಅವರನ್ನು ಕೇಳಿದ್ದಕ್ಕೆ ಅವರು ಪಂಚಾಯಿತಿಗೆ ಬರಲಿಲ್ಲ. ಬುಜ್ಜಪ್ಪ ರವರಿಗೆ ಪಂಚಾಯಿತಿ ಮಾಹಿತಿಯನ್ನು ಕೊಟ್ಟಿದ್ದರು. ಯಾವುದೇ ಅಹಿತಕರವಾದ ಘಟನೆ ನಮ್ಮ ಊರಿನಲ್ಲಿ ನಡೆದರೆ ಬುಜ್ಜಪ್ಪ ರವರ ಸಮ್ಮುಖದಲ್ಲಿ ತೀರ್ಮಾನವಾಗುವುದು ಎಂದರೆ ಸರಿ. ಮುಳಬಾಗಿಲಿಗೂ ಮತ್ತು ನಮ್ಮ ಗ್ರಾಮಕ್ಕೆ 10 ಕಿಮೀ ಅಂತರ ಇದೆ. ನಾನು ಪಂಚಾಯಿತಿಗೆ ಬರುವಷ್ಟರಲ್ಲಿ ಏನೇನು ಮಾತನಾಡಿದ್ದರು ಎಂದು ಗೊತ್ತಿಲ್ಲ. ನಮ್ಮ ಮುಂದೆ ಯಾವುದೇ ಪಂಚಾಯಿತಿ ನಡೆದಿಲ್ಲ ಮತ್ತು ಮುನಿರಾಜು ಅತ್ಯಾಚಾರ ಮಾಡಿದ್ದಾಗಿ ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿಯ ತಂದೆ ಕೂಲಿ ಮಾಡಲು ಹೋಗುತ್ತಾರೆ. 1ನೇ ಆರೋಪಿಯ ತಾಯಿಗೆ ಆರೋಗ್ಯದ ಸಮಸ್ಯೆ ಇದ್ದು ಆಕೆ ಎಲ್ಲೂ ಬರುವುದಿಲ್ಲ ಎಂದರೆ ಸರಿ. ಲಕ್ಷ್ಮಿದೇವಮ್ಮ ಪಂಚಾಯಿತಿಗೆ ಬಂದಿಲ್ಲ ಮತ್ತು ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ. ನೊಂದ ಬಾಲಕಿಯ ಕಡೆಯವರು 1ನೇ ಆರೋಪಿಗೆ ಹೆಣ್ಣು ನೋಡಲು ವಿಷಯ ಹೇಳಿದ್ದರು. ಆ ಬಗ್ಗೆ ನಾವು ಪಂಚಾಯಿತಿ ಮಾಡಿಲ್ಲ. ಹನುಮಂತಪ್ಪನ ಮಗ ನಾರಾಯಣಸ್ವಾಮಿ ನನಗೆ ಪರಿಚಯ. ಅವರು ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ. ಸದರಿ ನಾರಾಯಣಸ್ವಾಮಿಯ ವಿರುದ್ದ ಆರೋಪಿ, ಅಶ್ವಿನಿಯನ್ನು ಅತ್ಯಾಚಾರ ಮಾಡಲು ಪ್ರಯತ್ನ ಮಾಡಿದ ಎಂಬ ಬಗ್ಗೆ ಮುಳಬಾಗಿಲು ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದೆ ಎಂದರೆ ಸರಿ, ಆರೋಪಿ ದೊರೆಸ್ವಾಮಿ ಅಶ್ವಿನಿ ಗಂಡ ಎಂದರೆ ಸರಿ. ಓಬಪ್ಪ ದೊರೆಸ್ವಾಮಿ ಸಂಬಂಧಿಕ.

ಓಬಪ್ಪನ ಹೆಂಡತಿ 1ನೇ ಆರೋಪಿಯ ಸಂಬಂಧಿಕರು ಎಂದರೆ ಸರಿ. ಅಶ್ವಿನಿ ದೂರು ಕೊಟ್ಟಿದ್ದರಿಂದ ನಾರಾಯಣಸ್ವಾಮಿಗೆ ಸಪೋರ್ಟ್ ಮಾಡಲು ನಾವೆಲ್ಲಾ ಸೇರಿ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿ ಮುನಿರಾಜುವನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದೆ ಎಂದು ಹೇಳಿಲ್ಲ, ಆ ರೀತಿಯ ಯಾವುದೇ ಘಟನೆ ನಡೆಯದಿದ್ದರೂ ಸಹ ಅಮಾಯಕರನ್ನು ಸಿಕ್ಕಿ ಹಾಕಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.